**ಅಸಲ ದಾವಾ ನಂ.89/2019**
**ಡಿಡಬ್ಲ್ಯೂ:02**

**<u>ದಿನಾಂಕ: 24.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು: 5 ರಿಂದ 8 ನೇ ಪ್ರತಿವಾದಿ ಪರ ವಕೀಲರಿಂದ</u>**

1. ನಾನು ದಿ:05-06-1985 ರಂದು ಜನಿಸಿರುತ್ತೇನೆ. ನಾನು ನನ್ನ ತಂದೆಗೆ 5 ನೇ ಮಗ. ನಾನು ಪದವಿದರ. ನಾನು, ವಾದಿ ಮತ್ತು 1 ನೇ ಪ್ರತಿವಾದಿ ಸುಮಾರು ವರ್ಷಗಳಿಂದ ಕುರಬಲದಿನ್ನಿ ಗ್ರಾಮದಲ್ಲಿ ವಾಸವಾಗಿರುತ್ತೇವೆ. ಪ್ರತಿವಾದಿ ನಂ.5 ರಿಂದ 8 ರವರು ಸಲ್ಲಿಸಿದ ದಾವಾ ಸಮನ್ಸಗಳು ನನಗೆ 1 ನೇ ಪ್ರತಿವಾದಿ ಮತ್ತು ನನ್ನ ಸಹೋದರರಿಗೆ ಕುರಬಲದಿನ್ನಿ ಗ್ರಾಮಕ್ಕೆ ಬಂದಿದ್ದವು ಎಂದರೆ ಸಾಕ್ಷಿಯು ನಂದಿಹಾಳ ಗ್ರಾಮಕ್ಕೆ ಬಂದಿದ್ದವು ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಶಂಕರಗೌಡನ ಭಾಗಕ್ಕೆ ಬಂದ ಆಸ್ತಿಗಳನ್ನು ಕೂಡಿಸಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ತಂದೆ ಈರನಗೌಡ ಯಾವ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಅಂತಾ ಮಾಹಿತಿ ಇಲ್ಲ. ಈರನಗೌಡನ ಹೆಂಡತಿಯ ಹೆಸರು ಗೌರಮ್ಮ. ಸದರಿ ಗೌರಮ್ಮ ತೀರಿಕೊಂಡು ಸುಮಾರು ವರ್ಷ ಆಗಿರುತ್ತದೆ ಯಾವ ವರ್ಷ ಅಂತ ನಿಖರವಾಗಿ ಹೇಳಲು ಬರುವುದಿಲ್ಲ.ಈರನಗೌಡ ಮತ್ತು ಗೌರಮ್ಮ ತೀರಿಕೊಳ್ಳುವಾಗಿ ಅವರ ಹೆಸರಿಗೆ 24 ಎಕರೆ ಜಮೀನು ಇತ್ತು. ಈರನಗೌಡ ತೀರಿಕೊಂಡ ನಂತರ ಆತನಿಗೆ ಹೆಸರಿಗೆ ಖಾತೆ ಇದ್ದ ಜಮೀನುಗಳು 1 ನೇ ಪ್ರತಿವಾದಿ ಮತ್ತು ವಾದಿಗೆ ಹೆಸರಿಗೆ ಖಾತೆ ಆಗಿದ್ದವು. 1 ನೇ ಪ್ರತಿವಾದಿ ಮತ್ತು ವಾದಿ ಹೆಸರಿಗೆ ಆಸ್ತಿಗಳು ವಾರಸಾ ಆದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಈರನಗೌಡ ತೀರಿಕೊಂಡ ಎಷ್ಟು ವರ್ಷಗಳ ನಂತರ 1 ನೇ ಪ್ರತಿವಾದಿ ಮತ್ತು ವಾದಿ ಹೆಸರಿಗೆ ಆಸ್ತಿಗಳು ಖಾತೆ ಆದ್ದವು ಅಂತಾ ನಿಖರವಾಗಿ ಹೇಳಲು ಬರುವುದಿಲ್ಲ. ನನ್ನ ಪ್ರತಿವಾದ ಪತ್ರದೊಂದಿಗೆ ಅಥವಾ ಮುಖ್ಯ ವಿಚಾರಣೆದೊಂದಿಗೆ ಎಷ್ಟು ದಾಖಲೆಗಳು ಹಾಜರುಪಡಿಸಿರುತ್ತೇನೆ ಅಂತಾ ಹೇಳಲು ಆಗುವುದಿಲ್ಲ.

2. ಈರನಗೌಡನ ಮನೆತನಕ್ಕೆ ನಂದಿಹಾಳ ಗ್ರಾಮದ ಸರ್ವೆ ನಂ.1/2 ಕ್ಷೇತ್ರ 28 ಎಕರೆ 32 ಗುಂಟೆ ಜಮೀನು ಮತ್ತು ಸರ್ವೆ ನಂ.68 ಕ್ಷೇತ್ರ 21 ಎಕರೆ 8 ಗುಂಟೆ ಜಮೀನು ಹಾಗೂ ಸರ್ವೆ ನಂ.1/1 ಕ್ಷೇತ್ರ 16 ಎಕರೆ 38 ಗುಂಟೆ ಜಮೀನು ಇದ್ದ ಆಸ್ತಿಗಳು ಎಂದರೆ ಸರಿ. ಯಾಳವಾರ ಗ್ರಾಮದ ಜಮೀನು ಸರ್ವೆ ನಂ.280 ಕ್ಷೇತ್ರ 28 ಎಕರೆ 14 ಗುಂಟೆ ಈರನಗೌಡನ ಹೆಸರಿಗೆ ಖಾತೆ ಇತ್ತು ಎಂದರೆ ಸರಿ. ಈರನಗೌಡ 1944 ನೇ ಸಾಲಿನಲ್ಲಿ ತೀರಿಕೊಂಡ ನಂತರ ಆತನ ಮಕ್ಕಳಾದ 1 ನೇ ಪ್ರತಿವಾದಿ ಮತ್ತು ಶಂಕರಗೌಡ ಇವರ ಹೆಸರಿಗೆ ಮಾತ್ರ ಖಾತೆ ಆಗಿತ್ತು ಎಂದರೆ ಸರಿ. 1944 ನೇ ಸಾಲಿನಲ್ಲಿ 1 ನೇ ಪ್ರತಿವಾದಿ

ಮತ್ತು ಶಂಕರಗೌಡ ಅಲ್ಪವಯಸ್ಕರು ಆಗಿದ್ದರೂ ಎಂದರೆ ಸರಿ. 20-03-1976 ನೇ ಸಾಲಿನಲ್ಲಿ 1 ನೇ ಪ್ರತಿವಾದಿ ಮತ್ತು ಶಂಕರಗೌಡರ ನಡುವೆ ವಾಟ್ನಿ ಆಗಿತ್ತು ಎಂದರೆ ಸರಿ. ಸದರಿ ವಾಟ್ನಿ ಕಾಲಕ್ಕೆ ದಾವಾಸ್ತಿಗಳು 1 ನೇ ಪ್ರತಿವಾದಿ ಹೆಸರಿಗೆ ಹಂಚಿಕೆ ಆಗಿದ್ದವು ಎಂದರೆ ಸರಿ. ದಾವಾಸ್ತಿಗಳು 1 ನೇ ಪ್ರತಿವಾದಿಗೆ ಪಾಲುವಾಟ್ನಿಯಲ್ಲಿ ಹಂಚಿಕೆ ಆದ ನಂತರ 1 ನೇ ಪ್ರತಿವಾದಿ, ನಾನು, ನನ್ನ ತಾಯಿ ಮತ್ತು ಸಹೋದರಿಯರು ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ದಾವಾಸ್ತಿಗಳಲ್ಲಿ 1 ನೇ ಪ್ರತಿವಾದಿ ತೀರಿಕೊಳ್ಳುವರೆಗೂ ನಮ್ಮ ಕುಟುಂಬದಲ್ಲಿ ಯಾವುದೇ ಪಾಲುವಾಟ್ನಿಯಾಗಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣ 3 ನೇ ಪ್ರತಿವಾದಿಗೂ ಮತ್ತು ನನಗೂ ಆಗಿಲ್ಲ ಎಂದು ನುಡಿಯುತ್ತಾರೆ. ವಾಟ್ನಿ ಕಾಲಕ್ಕೆ ನನ್ನ ಸಹೋದರಿಗೆ ಯಾವುದೇ ಜಮೀನು ಮತ್ತು ಎಷ್ಟು ಕ್ಷೇತ್ರ ಹಂಚಿಕೆ ಮಾಡಿರುತ್ತೇವೆ ಅಂತಾ ಹೇಳಲು ಬರುವುದಿಲ್ಲ. 2012 ನೇ ಸಾಲಿನಲ್ಲಿ ನನ್ನ ಮತ್ತು 3 ನೇ ಪ್ರತಿವಾದಿಗೆ ದಾವಾಸ್ತಿ ಖಾತೆ ಬದಲಾವಣೆ ಆಗಿದ್ದವು. ಸದರಿ ಸಮಯದಲ್ಲಿ ನನ್ನ ಸಹೋದರಿಯರ ಸಹಿಯನ್ನು ವಾಟ್ನಿ ಪತ್ರಕ್ಕೆ ಪಡೆದುಕೊಂಡಿರುವುದಿಲ್ಲ. 1976 ನೇ ಸಾಲಿನಲ್ಲಿ ಆದ ಪಾಲುವಾಟ್ನಿ ಕುರಿತು ನಿಂಗಮ್ಮಳಿಗೂ ಮತ್ತು ವಾದಿಗೂ ಮಾಹಿತಿ ಇತ್ತು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.